# All India Radio: Bangalore
# National Bulletin In Kannada
# 20.06.2025 / 7.35am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧. ಬಿಹಾರದಲ್ಲಿಂದು ೫ ಸಾವಿರದ ೯೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

೨. ಬೆಂಗಳೂರಿನಲ್ಲಿ ಇಂದು ಬಿಜಿಎಸ್‌ನ ನೂತನ ಆಸ್ಪತ್ರೆ ಲೋಕಾರ್ಪಣೆಗೊಳಿಸಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ

೩. ಕೈಲಾಸ ಮಾನಸಸರೋವರ ಯಾತ್ರೆ - ಇಂದಿನಿಂದ ಆರಂss ; ನಾಥುಲಾಪಾಸ್‌ನಲ್ಲಿ ರಾಜ್ಯಪಾಲ ಓಂ ಪ್ರಕಾಶ್ ಮಾಥುರ್ ಚಾಲನೆ

೪. ಅಂತರರಾಷ್ಟ್ರೀಯ ಯೋಗ ದಿನ : ಸಂಸ್ಕೃತಿ ಸಚಿವಾಲಯದಿಂದ ೧೦೦ ಐತಿಹಾಸಿಕ, ೫೦ ಕ್ಕೂ ಹೆಚ್ಚು ಸಾಂಸ್ಕೃತಿಕ ತಾಣಗಳಲ್ಲಿ ನಾಳೆ ಯೋಗ ಅಧಿವೇಶನ

೫. ಭಾರತ - ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿ ಇಂದಿನಿಂದ ಆರಂಭ

><><><><<><><

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬಿಹಾರ ಪ್ರವಾಸ ಕೈಗೊಳ್ಳಲಿದ್ದಾರೆ. ಅವರು ಸಿವಾನ್ ಜಿಲ್ಲೆ ಪಚ್ರುಖಿ ಬ್ಲಾಕ್‌ನ ಜಸೌಲಿ ಗ್ರಾಮದಲ್ಲಿ ಮಧ್ಯಾಹ್ನ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.ಜಸೌಲಿಯಿಂದ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಅವರು, ೫ ಸಾವಿರದ ೯೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ನಗರಾಭಿವೃದ್ಧಿ, ಕೊಳಚೆ ನೀರು ಸಂಸ್ಕರಣೆ, ಪ್ರಧಾನ ಮಂತ್ರಿ

ಆವಾಸ ಯೋಜನೆ ಹಾಗೂ ರೈಲ್ವೆ ಸಂಬಂಧಿತ ಹಲವು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದು, ನೂತನ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

><><><<><><

ಕೇಂದ್ರ ಗೃಹ ಸಚಿವ ಅಮಿತ್ ಶಾ ನಿನ್ನೆ ಸಂಜೆ ಬೆಂಗಳೂರಿಗೆ ಆಗಮಿಸಿದರು, ಈ ವೇಳೆ ಬಿಜೆಪಿ ನಾಯಕರು ಮತ್ತು ಬೆಂಬಲಿಗರಿಂದ ಆತ್ಮೀಯ ಸ್ವಾಗತ ಕೋರಿದರು.  ಅಮಿತ್ ಶಾ ಅವರು ಹಿರಿಯ ಬಿಜೆಪಿ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯುರಪ್ಪ ಅವರನ್ನು ಭೇಟಿಯಾದರು. ಇಂದು, ಶಾ ಅವರು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್ ಅನ್ನು ಉದ್ಘಾಟಿಸಲಿದ್ದಾರೆ, ಇಂದು  ನೆಲಮಂಗಲದ ಸಮೀಪ ನಡೆಯುವ ಬಿಜಿಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.ಬಡ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿರುವ ಬಿಜಿಎಸ್ ಆಸ್ಪತ್ರೆಯನ್ನು ೯೩೦ ಹಾಸಿಗೆಗಳ ಬಹು ವಿಶೇಷ ಆಸ್ಪತ್ರೆಯನ್ನಾಗಿ ವಿಸ್ತರಿಸಲಾಗಿದೆ. ಆಸ್ಪತ್ರೆಯು ವಿಶೇಷ ತೀವ್ರ ನಿಗಾಘಟಕ ಹಾಗೂ ಅತ್ಯಾಧುನಿಕ ವೈದ್ಯಕೀಯ ಸೇವೆ ಒದಗಿಸಲಿದೆ. ಸಮಾರಂಭದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಸಚಿವ ಶರಣಪ್ರಕಾಶ್ ಸೇರಿದಂತೆ ಹಲವು ಗಣ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಏತನ್ಮಧ್ಯೆ, ಸಚಿವ ಅಮಿತ್ ಶಾ ಜೂನ್ ೨೨ ಮತ್ತು ೨೩ ರಂದು ಛತ್ತೀಸ್‌ಗಢಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದಾರೆ, ಈ ಪ್ರದೇಶದಲ್ಲಿ ಆಂತರಿಕ ಭದ್ರತೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವ ಕೇಂದ್ರ ಸರ್ಕಾರದ ಬದ್ಧತೆಯ ಭಾಗವಾಗಿದೆ, ಈ ಭೇಟಿಯು ವಿಶೇಷವಾಗಿ ದುರ್ಬಲ ಮತ್ತು ಹಿಂದುಳಿದ ಜಿಲ್ಲೆಗಳಲ್ಲಿಎಡಪಂಥೀಯ ಉಗ್ರವಾದವನ್ನು ಎದುರಿಸುವಲ್ಲಿ ಮತ್ತು ಬೆಳವಣಿಗೆಯನ್ನು ವೇಗಗೊಳಿಸುವಲ್ಲಿ ಕೇಂದ್ರ ಮತ್ತು ರಾಜ್ಯದ ನಡುವಿನ ಸಮನ್ವಯವನ್ನು ಬಲಪಡಿಸುವ ನಿರೀಕ್ಷೆಯಿದೆ,

><><><<><><

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೂರು ದಿನಗಳ ಭೇಟಿಗಾಗಿ ಡೆಹ್ರಾಡೂನ್‌ಗೆ ಆಗಮಿಸಿದ್ದಾರೆ. ಅವರನ್ನು ಜಾಲಿಗ್ರಾಂಟ್ ವಿಮಾನ ನಿಲ್ದಾಣದಲ್ಲಿ ಗವರ್ನರ್ ಲೆಫ್ಟಿನೆಂಟ್ ಜನರಲ್ ಗುರ್ಮೀತ್ ಸಿಂಗ್ ಮತ್ತು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಇತರ ಗಣ್ಯರು ಸ್ವಾಗತಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರಪತಿ ನಿಕೇತನದಲ್ಲಿ ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ, ಅವರು ರಾಷ್ಟ್ರಪತಿ ಉದ್ಯಾನವನದ ಶಿಲಾನ್ಯಾಸವನ್ನೂ ನೆರವೇರಿಸಲಿದ್ದಾರೆ. ಜೂನ್ ೨೪ ರಿಂದ ರಾಷ್ಟ್ರಪತಿ ನಿಕೇತನ ಮತ್ತು ರಾಷ್ಟ್ರಪತಿ ತಪೋವನವನ್ನು ಸಾರ್ವಜನಿಕರಿಗೆ ತೆರೆಯಲಾಗುತ್ತಿದೆ .

><><><><<><><

ಸಿಕ್ಕಿಂನಲ್ಲಿ, ಕೈಲಾಸ ಮಾನಸ ಸರೋವರ ಯಾತ್ರೆ ಇಂದು ಬೆಳಿಗ್ಗೆ ೮.೪೫ ರ ಸುಮಾರಿಗೆ ನಾಥುಲಾದಿಂದ ಆರಂಭವಾಗಲಿದೆ. ಒಟ್ಟು ೩೬ ಸದಸ್ಯರ ಗುಂಪು ಈ ಧಾರ್ಮಿಕ ಪ್ರಯಾಣವನ್ನು ಪ್ರಾರಂಭಿಸಲಿದ್ದು, ಯಾತ್ರೆಯನ್ನು ರಾಜ್ಯಪಾಲ ಓಂ ಪ್ರಕಾಶ್ ಮಾಥುರ್ ಅವರು ಉದ್ಘಾಟಿಸಲಿದ್ದಾರೆ. ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಿ ಎಸ್ ರಾವ್ ಅವರು ರಾಜ್ಯಪಾಲರು ಯಾತ್ರಿಕರೊಂದಿಗೆ ಸಂವಾದ ನಡೆಸಿ ಯಾತ್ರೆಗೆ ಚಾಲನೆ ನೀಡಲಿದ್ದಾರೆ.

ಧ್ವನಿ : ಸಿ ಎಸ್ ರಾವ್ - ೨೧ ಸೆಕೆಂಡ್

ವಿದೇಶಾಂಗ ಸಚಿವಾಲಯದ ಇಬ್ಬರು ಅಧಿಕಾರಿಗಳ ಜೊತೆಗೆ ೩೬ ಯಾತ್ರಿಕರನ್ನು ಒಳಗೊಂಡ ಮೊದಲ ಬ್ಯಾಚ್ ಇಂದು ತಮ್ಮ ಪ್ರಯಾಣವನ್ನು ಪ್ರಾರಂಭಿಸಲಿದೆ. ಪ್ರತಿ ತಂಡ ಯಾತ್ರೆಯನ್ನು ಪೂರ್ಣಗೊಳಿಸಲು ೧೦ ರಿಂದ ೧೧ ದಿನಗಳನ್ನು ತೆಗೆದುಕೊಳ್ಳುತ್ತದೆ ಎಂದು ನಮ್ಮ ವರದಿಗಾರರು ವರದಿ ಮಾಡಿದ್ದಾರೆ. ಈ ವರ್ಷ ಸಿಕ್ಕಿಂನ ನಾಥುಲಾದಿಂದ ಕೈಲಾಶ್ ಮಾನಸರೋವರ ಯಾತ್ರೆಯನ್ನು ಕೈಗೊಳ್ಳುವ ಒಟ್ಟು ೧೦ ತಂಡಗಳಿವೆ. ಐದು ವರ್ಷಗಳ ಅಂತರದ ನಂತರ ಯಾತ್ರೆ ಪುನರಾರಂಭವಾಗಿದೆ. ಎಲ್ಲಾ ಯಾತ್ರಿಕರ ಸುಗಮ ಮತ್ತು ತೊಂದರೆ-ಮುಕ್ತ ಭೇಟಿಯನ್ನು ಖಚಿತಪಡಿಸಿಕೊಳ್ಳಲು ವಿವಿಧ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡುತ್ತಿವೆ. ಈ ತಕ್ಷಣದ ಸ್ಥಳಾಂತರಿಸುವಿಕೆಯನ್ನು ಸುಗಮಗೊಳಿಸಲು ಇಂದು ವಿಶೇಷ ಹೆಲಿಕಾಪ್ಟರ್ ಹಾರಾಟವನ್ನು ನಿಯೋಜಿಸಲಾಗಿದೆ ಎಂದು ನಮ್ಮ ವರದಿಗಾರರು ತಿಳಿಸಿದ್ದಾರೆ.

><><><><<><><

ಸಂಸ್ಕೃತಿ ಸಚಿವಾಲಯವು ೧೧ ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ೧೦೦ ಪ್ರವಾಸಿ ಆಧಾರಿತ ಐತಿಹಾಸಿಕ ತಾಣಗಳು ಮತ್ತು ದೇಶಾದ್ಯಂತ ೫೦ ಕ್ಕೂ ಹೆಚ್ಚು ಸಾಂಸ್ಕೃತಿಕ ತಾಣಗಳಲ್ಲಿ ಯೋಗ ಅಧಿವೇಶಗಳನ್ನು ಆಯೋಜಿಸುವ ಮೂಲಕ ಆಚರಿಸುತ್ತದೆ.  ನಾಳೆ  ನಿಗದಿಯಾಗಿರುವ ಈ ಕಾರ್ಯಕ್ರಮಗಳು ವಿಶಾಖಪಟ್ಟಣದಲ್ಲಿ ಆಯುಷ್ ಸಚಿವಾಲಯವು ಆಯೋಜಿಸುತ್ತಿರುವ ಮುಖ್ಯ ಆಚರಣೆಗಳಿಗೆ ಪೂರಕವಾಗಿರುತ್ತವೆ, ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಏತನ್ಮಧ್ಯೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ರಾಜಸ್ಥಾನದ ಜೋಧಪುರದ ಐತಿಹಾಸಿಕ ಮೆಹ್ರಾನ್‌ಗಢ ಕೋಟೆಯಲ್ಲಿ ನಡೆಯುವ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಯೋಗ ದಿನಾಚರಣೆಯನ್ನು ಆಯೋಜಿಸುವ ಕೆಲವು ಪ್ರತಿಷ್ಠಿತ ಸ್ಥಳಗಳಲ್ಲಿ ಅಸ್ಸಾಂನ ಚಾರೈಡಿಯೋ ಮೈದಂ, ಗುಜರಾತ್‌ನ ರಾಣಿ ಕಿ ವಾವ್ ಮತ್ತು ಧೋಲವಿರ, ಕರ್ನಾಟಕದ ಹಂಪಿ ಮತ್ತು ಪಟ್ಟದಕಲ್, ಮಧ್ಯಪ್ರದೇಶದ ಖಜುರಾಹೊ ಸ್ಮಾರಕಗಳ ಗುಂಪು ಮತ್ತು ಸಾಂಚಿ ಸ್ತೂಪ, ಒಡಿಶಾದ ಕೊನಾರ್ಕ್‌ನಲ್ಲಿರುವ ಸೂರ್ಯ ದೇವಾಲಯ, ಮಹಾರಾಷ್ಟ್ರದ ಎಲಿಫೆಂಟಾ ಗುಹೆಗಳು ಮತ್ತು ತಮಿಳುನಾಡಿನ ತಂಜಾವೂರಿನ ಬೃಹದೀಶ್ವರ ದೇವಾಲಯ ಸೇರಿವೆ.

><><><<><><

ಆಕಾಶವಾಣಿ ವಾರ್ತೆಗೆ  ನೀಡಿದ ವಿಶೇಷ ಸಂದರ್ಶನದಲ್ಲಿ, ರಾಜ್ಯ ಸಚಿವ (ಸ್ವತಂತ್ರ ಉಸ್ತುವಾರಿ) ಪ್ರತಾಪ್‌ರಾವ್ ಜಾಧವ್, ಯೋಗವು ಕೇವಲ ಒಂದು ದಿನದ ಕಾರ್ಯಕ್ರಮವಲ್ಲ, ಅದು ಜೀವನಶೈಲಿಯಾಗಿದೆ ಎಂದು ಹೇಳಿದರು. ಜನರು ತಮ್ಮ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಮತ್ತು ಅವರ ಕುಟುಂಬ ಸದಸ್ಯರು ಸಹ ಯೋಗವನ್ನು ಅಭ್ಯಾಸ ಮಾಡಲು ಪ್ರೋತ್ಸಾಹಿಸಬೇಕು ಎಂದು ಅವರು ಜನತೆಯಲ್ಲಿ ಮನವಿ ಮಾಡಿದರು.

><><><<><><

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಗಂಭೀರ ತಿರುವು ಪಡೆದಿದ್ದು, ತಹರಾನ್‌ನಲ್ಲಿರುವ ಇರಾನ್‌ನ ಆಂತರಿಕ ಭದ್ರತಾ ಮುಖ್ಯ ಕಚೇರಿಯನ್ನು ಇಸ್ರೇಲ್ ನಿನ್ನೆ ಧ್ವಂಸಗೊಳಿಸಿದೆ.

ತಕ್ಷಣವೇ ಇರಾನ್ ಕ್ಷಿಪಣಿಗಳು ಇಸ್ರೇಲ್‌ನ ಪ್ರಮುಖ ವೈದ್ಯಕೀಯ ಕೇಂದ್ರವೊಂದನ್ನು ಗುರಿಯಾಗಿಸಿ ದಾಳಿ ನಡೆಸಿವೆ. ಈ ಪರಸ್ಪರ ದಾಳಿಗಳು ಎರಡೂ ದೇಶಗಳ ಮಧ್ಯೆ ಇತ್ತೀಚಿನ ಇತಿಹಾಸದಲ್ಲಿ ನಡೆದ ಅತ್ಯಂತ ತೀವ್ರವಾದ ನೇರ ಸೇನಾ ಸಂಘರ್ಷವಾಗಿವೆ. ಇಸ್ರೇಲ್‌ನ ಸೋರೋಕಾ ವೈದ್ಯಕೀಯ ಕೇಂದ್ರದ ಮೇಲೆ ನಡೆದ ದಾಳಿಗೆ ಇಸ್ರೇಲ್ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ಇರಾನ್‌ನ ಪ್ರಮುಖ ಸೇನಾ ತಾಣಗಳನ್ನು ಗುರಿಯಾಗಿಸಿ ಕಾರ್ಯಾಚರಣೆಗಳನ್ನು ತೀವ್ರಗೊಳಿಸುವುದಾಗಿ ಘೋಷಿಸಿದ್ದಾರೆ. ನತಾಂಜ್‌ನಲ್ಲಿರುವ ಆರಾಕ್ ಹೆವಿ ವಾಟರ್ ರಿಯಾಕ್ಟರ್ ಮತ್ತು ಪ್ರಮುಖ ಸೌಲಭ್ಯಗಳ ಮೇಲೆ ಈಗಾಗಲೇ ಇಸ್ರೇಲ್ ನಡೆಸಿದೆ. ಇರಾನ್‌ನ ಅಣುಬಾಂಬು ಮತ್ತು ಕ್ಷಿಪಣಿ ತಂತ್ರಜ್ಞಾನಕ್ಕೆ ಹಿನ್ನಡೆಯುಂಟು ಮಾಡುವುದು ಇದರ ಉದ್ದೇಶವಾಗಿದೆ. ಇರಾನ್‌ನ ಮಾಧ್ಯಮಗಳು ಆರಾಕ್ ಘಟಕದಿಂದ ಯಾವುದೇ ವಿಕಿರಣ ಅಪಾಯವಿಲ್ಲ ಎಂದು ಸ್ಪಷ್ಟಪಡಿಸಿ, ದಾಳಿಗೆ ಮುನ್ನ ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ವರದಿ ಮಾಡಿವೆ.

><><><<><><

ಆಪರೇಷನ್ ಸಿಂಧು ಇದರ ಭಾಗವಾಗಿ, ಇಸ್ರೇಲ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇರಾನ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಸಂಘರ್ಷದಿಂದಾಗಿ ಪರಿಸ್ಥಿತಿ ಹದಗೆಡುತ್ತಿರುವ ಕಾರಣ ಭಾರತವು ಇರಾನ್‌ನಿಂದ ತನ್ನ ಪ್ರಜೆಗಳನ್ನು ಸ್ಥಳಾಂತರಿಸಲು ಆಪರೇಷನ್ ಸಿಂಧುವನ್ನು ಪ್ರಾರಂಭಿಸಿದೆ. ಇಸ್ರೇಲ್‌ನಿಂದ ಹೊರಬರಲು ಬಯಸುವ ಭಾರತೀಯ ಪ್ರಜೆಗಳ ಪ್ರಯಾಣವನ್ನು ಭೂ ಗಡಿಗಳ ಮೂಲಕ ಮತ್ತು ನಂತರ ಭಾರತಕ್ಕೆ ವಿಮಾನದ ಮೂಲಕ ಸುಗಮಗೊಳಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಟೆಲ್ ಅವೀವ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಸ್ಥಳಾಂತರಿಸುವಿಕೆಗೆ ವ್ಯವಸ್ಥೆಗಳನ್ನು ಮಾಡಲಿದೆ ಎಂದು ಸಚಿವಾಲಯವು ತಿಳಿಸಿದೆ. ಮತ್ತು ಎಲ್ಲಾ ಭಾರತೀಯ ನಾಗರಿಕರು www.indembassyisrael.gov.in/indian_national_reg,ನಲ್ಲಿ ನೋಂದಾಯಿಸಿಕೊಳ್ಳುವಂತೆ ತಿಳಿಸಿದೆ.

><><><<><><

ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿ ಇಂದು ಆರಂಭವಾಗಲಿದ್ದು, ಮೊದಲ ಪಂದ್ಯ ಲೀಡ್ಸ್‌ನ ಹೆಡ್ಡಿಂಗ್ಲಿ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ. ಅನುಭವಿ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾದ ನಂತರ ಶುಭಮನ್ ಗಿಲ್ ನಾಯಕರಾಗಿರುವ ಈ ಇಂಗ್ಲೆಂಡ್ ಪ್ರವಾಸ ಭಾರತೀಯ ತಂಡಕ್ಕೆ ಹೊಸ ಅಧ್ಯಾಯವನ್ನು ತೆರೆಯಲಿದೆ. ಪಂದ್ಯಕ್ಕೂ ಮುನ್ನ, ಉಪನಾಯಕ ರಿಷಭ್ ಪಂತ್, ನಾಯಕ ಗಿಲ್ ಅವರೊಂದಿಗಿನ ಉತ್ತಮ ಆಫ್-ಫೀಲ್ಡ್ ಸೌಹಾರ್ದತೆ ಈ ಟೆಸ್ಟ್ ಸರಣಿಯಲ್ಲಿ ಸಹಾಯಕವಾಗಲಿದೆ ಎಂದು ಹೇಳಿದ್ದಾರೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ನಿವೃತ್ತಿಯನ್ನು ಉಲ್ಲೇಖಿಸಿ, ಪಂತ್ ಇದು ತಂಡದಲ್ಲಿ ಹೊಸ ಸಂಸ್ಕೃತಿಯೊಂದನ್ನು ನಿರ್ಮಿಸಲು ಅವಕಾಶವಾಗಿದೆ ಎಂದು ಅವರು ಹೇಳಿದರು.

><><><><<><><